ಸಿಡಬ್ಲ್ಯೂ 9

**ದಿನಾಂಕಃ 23-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀಸವಾಲುಃ ಶ್ರೀ.ಎಸ್.ಆರ್.ಬಿ. 1 ನೇ ಆರೋಪಿ ಪರ ವಕೀಲರಿಂದಃ-**

ಈಗ ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿತನನ್ನು ಪಟೇಲ ವೆಂಕಟರಾಯಪ್ಪ ಎಂದು ಸಹ ಕರೆಯುತ್ತಾರೆ ಎಂದರೆ ಸಾಕ್ಷಿ ವೆಂಕಟಸ್ವಾಮಿ ಎಂದು ಕರೆಯುತ್ತಾರೆ. ಎನ್ನುತ್ತಾರೆ. 1 ನೇ ಆರೋಪಿಯ ಹೆಸರು ಪಟೇಲ ವೆಂಕಟರಾಯಪ್ಪ ಅಡ್ಡ ಹೆಸರು ವೆಂಕಟಸ್ವಾಮಿ ಎಂದರೆ ಸರಿಯಲ್ಲ. 1 ನೇ ಆರೋಪಿಯ ತಂದೆಯ ಹೆಸರು ತಿಮ್ಮಯ್ಯ ಎಂದರೆ ಹೌದು. 1 ನೇ ಆರೋಪಿಯ ಸ್ವಂತ ಊರು ಪಾಪತಿಮ್ಮನಹಳ್ಳಿ ಎಂದರೆ ಹೌದು. 1 ನೇ ಆರೋಪಿ 30.05.1989 ರಲ್ಲಿ ಒಂದು ನಿವೇಶನವನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. 29.03.2013 ರಲ್ಲಿ ಸದರಿ ನಿವೇಶನವನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ವೆಂಕಟಸ್ವಾಮಿ ಬಿನ್ ತಿಮ್ಮಯ್ಯ ಎಂಬುವವರು ಮಾರಿರುತ್ತಾರೆ ಎನ್ನುತ್ತಾರೆ. ಸದರಿ ನಿವೇಶನವನ್ನು ಕೊಂಡುಕೊಂಡಿದ್ದು 1 ನೇ ಆರೋಪಿ ಮಾರಾಟ ಮಾಡಿರುವುದು ಸಹ 1 ನೇ ಆರೋಪಿ ಎಂದರೆ ಸುಳ್ಳು ಎನ್ನುತ್ತಾರೆ. ಎಫ್ ಎಸ್ ಎಲ್ ರಿಪೋರ್ಟ್ ಬರವಣಿಗೆ ಬೇರೆ ಬೇರೆ ಬಂದಿರುತ್ತದೆ ಎಂದರೆ ಸರಿಯಲ್ಲ. ಮಾದರಿ ಸಹಿ ಬೇರೆ ಬೇರೆ ಇರುತ್ತದೆ ಎಂದು ಯಾವುದೇ ವರದಿ ಬಂದಿಲ್ಲ ಎಂದರೆ ಎಫ್ ಎಸ್ ಎಲ್ ನಿಂದ ಬಂದಿರುವುದು ನನಗೆ ಗೊತ್ತಿಲ್ಲ ಎನ್ನುತ್ತಾರೆ. 1989 ರಲ್ಲಿ ಪಟೇಲ ವೆಂಕಟಪ್ಪ ರವರು ಖರೀದಿ ಮಾಡಿದ ಕ್ರಯ ಪತ್ರದ ವ್ಯವಹಾರಕ್ಕೆ ಸಂಬಂದಿಸಿದಂತೆ ಸದರಿ ಪಟೇಲ ವೆಂಕಟರಾಯಪ್ಪ ರವರ ಹೆಬ್ಬೆಟ್ಟಿನ ಗುರುತು ಸಬ್ ರಿಜಿಸ್ಟರ್ ಕಚೇರಿಯಲ್ಲಿ ಇರುತ್ತದೆ ಎಂದರೆ ಇರುತ್ತದೆ ಎನ್ನುತ್ತಾರೆ.

29.03.2013 ರಲ್ಲಿ ಮಾರಾಟ ಮಾಡಿದ ಅದರಲ್ಲೂ ಸಹ ಹೆಬ್ಬಟ್ಟಿನ ಗುರುತು ಇರುತ್ತದೆ ಎಂದರೆ ಇರುತ್ತದೆ ಎನ್ನುತ್ತಾರೆ. ಸದರಿ ಎರಡೂ ಕ್ರಯ ಪತ್ರಗಳ ಹೆಬ್ಬಟ್ಟಿನ ಗುರುತನ್ನು ಎಫ್ ಎಸ್ ಎಲ್ ಗೆಂದು ಕಳುಹಿಸಿಲ್ಲ ಎಂದರೆ ಸಾಕ್ಷಿ ಹೆಬ್ಬಟ್ಟಿನ ಗುರುತುನ್ನು ಕಳಹಿಸಿಲ್ಲ ಎನ್ನುತ್ತಾರೆ. ಸದರಿ ಹೆಬ್ಬಟ್ಟಿನ ಗುರುತುಗಳನ್ನು ಎರಡೂ ಒಂದೇ ಇದ್ದ ಕಾರಣ ಪಡೆದುಕೊಂಡಿರುವುದಿಲ್ಲ ಮತ್ತು ಕಳುಹಿಸಿರುವುದಿಲ್ಲ ಎಂದರೆ ಸಾಕ್ಷಿ ಕಳುಹಿಸಿರುತ್ತೆನೆ ಎನ್ನುತ್ತಾರೆ. ಯಾವುದೇ ಸಾಕ್ಷಿದಾರರು ನಿಮ್ಮ ಹೇಳಿಕೆಯನ್ನು ಕೊಟ್ಟಿಲ್ಲ ಎಂದರೆ ಕೊಟ್ಟಿರುತ್ತಾರೆ ಎನ್ನುತ್ತಾರೆ. ಸಬ್ ರಿಜಿಸ್ಟರ್ ಕಚೇರಿಯಲ್ಲಿ ನೀವು ಯಾವುದೇ ರೀತಿಯ ಮಹಜರ್ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 3 ಅಮಾನತ್ತು ಪಂಚನಾಮೆ ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿ ಯಾವುದೇ ತರಹದ ತಪ್ಪು ಮಾಡಿಲ್ಲದಿದ್ದರೂ ಸಹ ಮಾಡಿರುತ್ತಾರೆ ಎಂದು ಸಾಕ್ಷಿಗಳಿಂದ ಸುಳ್ಳು ಹೇಳಿಕೆಯನ್ನು ಪಡೆದುಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಪಟೇಲ ವೆಂಕಟರಾಯಪ್ಪ ಬೇರೆ ಮತ್ತು 1 ನೇ ಆರೋಪಿ ಬೇರೆ ಎಂದು ಯಾವುದೇ ಸಾಕ್ಷಿ ನಿಮ್ಮ ಮುಂದೆ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

**ಪಾಟೀಸವಾಲು:** ಆರೋಪಿ 2 ರಿಂದ 4 ಪರ ವಕೀಲರು ಮೇಲಿನ ಪಾಟಿಸವಾಲನ್ನು ಅಳವಡಿಸಿಕೊಳ್ಳಲು ಕೋರಿದ ಮೇರೆಗೆ ಅಳವಡಿಸಿಕೊಳ್ಳಲಾಯಿತು.

**ಮರು ವಿಚಾರಣೆ ಇಲ್ಲ**.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.